ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

BANGALORE ELECTRICITY SUPPLY COMPANY LIMITED
(wholly owned Government of Karnataka undertaking)

ದೂರವಾಣಿ:08154-251102
ಇ-ಮೈಲ್ : eeChinthamanidivision@bescom.co.in
: eebescomcmy@gmail.com
ಸಂಖ್ಯೆ: ಕಾನಿಇಂ(ವಿ)/ಸ.ಕಾ.ನಿ.ಇ/ಸ.ಇ(ತಾ)/ಚಿಂ/2025-26/

ರವರ ಕಚೇರಿ
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಬೆ.ವಿ.ಕಂ, ವಿಭಾಗೀಯ ಕಛೇರಿ,
ಚಿಂತಾಮಣಿ-563125.
ದಿನಾಂಕ:

ರವರಿಗೆ,

ಶ್ರೀ. ಲಲಿತ ಕುಮಾರ್ ಕಾಂಕ್ರಿಯಾ ಬಿನ್ ಕೇಂಚಾಂದ್ ಜೈನ್
ಹಾರಡಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು,

ಮಾನ್ಯರೇ,

ವಿಷಯ: ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ಹಾರಡಿ ಗ್ರಾಮದಲ್ಲಿ ಕೈಗಾರಿಕ ಉದ್ದೇಶಕ್ಕಾಗಿ 500 ಕೆವಿಎ ವಿದ್ಯುತ್ ಹೊರೆಯನ್ನು ಹೆಚ್.ಟಿ-2(ಎ) ಜಕಾತಿಯಲ್ಲಿ ವಿದ್ಯುತ್ ಸಂಪರ್ಕವನ್ನು ಮಂಜೂರು ಮಾಡುವ ಬಗ್ಗೆ.

>>>><<<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಮನವಿಯಲ್ಲಿ ನೀವು ಕೋರಿರುವಂತೆ ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿ, ಹಾರಡಿ ಗ್ರಾಮದಲ್ಲಿ ಕೈಗಾರಿಕ ಉದ್ದೇಶಕ್ಕಾಗಿ 500 ಕೆವಿಎ ವಿದ್ಯುತ್ ಹೊರೆಯನ್ನು ಹೆಚ್.ಟಿ-2(ಎ) ಜಕಾತಿಯಲ್ಲಿ ವಿದ್ಯುತ್ ಸಂಪರ್ಕವನ್ನು ಈ ಕೆಳಗೆ ಸೂಚಿಸಿರುವ ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿದೆ.

1. ನಿಮ್ಮ ಸ್ಥಾವರಕ್ಕೆ ವಿದ್ಯುತ್ ಸರಬರಾಜನ್ನು 11ಕೆ.ವಿ ಸಂಪರ್ಕದಲ್ಲಿ ನೀಡಲಾಗುವುದು.
2. ವಿದ್ಯುತ್ ಮಂಜೂರಾತಿಯು ಈ ದಿನಾಂಕದಿಂದ 90 ದಿವಸಗಳವರೆಗೆ ಚಾಲ್ತಿಯಲ್ಲಿರುತ್ತದೆ.
3. ನಿಮ್ಮ ಸ್ಥಾವರದ ಜಕಾತಿಯು ಹೆಚ್.ಟಿ-2(ಎ) ಆಗಿರುತ್ತದೆ. (ಜಕಾತಿ ಆದೇಶದನ್ವಯ ಸೂಕ್ತ ಜಕಾತಿ ಅನ್ವಯವಾಗುತ್ತದೆ).
4. ಈ ಕೆಳಕಂಡ ಮೊತ್ತವನ್ನು **ಸಹಾಯಕ ಇಂಜನಿಯರ್, ಬೆವಿಕಂ ಜಂಗಮಕೋಟೆ** ರವರ ಹೆಸರಿನಲ್ಲಿ ಡಿಡಿ ಮುಖಾಂತರ ಈ ಪತ್ರದ ದಿನಾಂಕದಿಂದ 90 ದಿನಗೊಳಗಾಗಿ ಪಾವತಿಸಬೇಕು ಹಾಗೂ ವಿದ್ಯುತ್ ಪರಿವೀಕ್ಷಕರ ಶುಲ್ಕವನ್ನು ಉಪ ವಿದ್ಯುತ್ ಪರಿವೀಕ್ಷಕರ, ಕರ್ನಾಟಕ ಸರ್ಕಾರ ರವರಿಗೆ ಪಾವತಿಸುವುದು. ವಿಳಂಬವಾದಲ್ಲಿ ಹಾಗೂ ಮೇಲೆ ತಿಳಿಸಿರುವ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಕೆಇಆರ್ಸಿ ತಿದ್ದುಪಡಿ ಷರತ್ತು 4.03(ii) ಪ್ರಕಾರ ವಿದ್ಯುತ್ ಮಂಜೂರಾತಿಯನ್ನು ರದ್ದು ಪಡಿಸಲಾಗುವುದು.

| ಠೇವಣಿ ವಿವರಗಳು (ಲೆಕ್ಕ ಶೀರ್ಷಿಕೆ) | ಠೇವಣಿಯ ಮೊತ್ತ | ರೂ ಅಕ್ಷರಗಳಲ್ಲಿ |
|---|---|---|
| 2 ತಿಂಗಳ ಕನಿಷ್ಠ ಠೇವಣಿ ಬಾಬ್ತು | 10,05,000.00 | ರೂ. ಹತ್ತು ಲಕ್ಷದ ಐದು ಸಾವಿರ ಮಾತ್ರ |
| 5% ಮೇಲ್ವಿಚಾರಣಾ ಶುಲ್ಕ | 25936.00 | ರೂ. ಇಪ್ಪತ್ತೈದು ಸಾವಿರದ ಒಂಬೈನೂರ ಮೂವತ್ತಾರು ಮಾತ್ರ |
| ಸಾಮಗ್ರಿಗಳ ತಪಾಸಣಾ ಶುಲ್ಕ | 5,000.00 | ರೂ. ಐದು ಸಾವಿರ ರೂಪಾಯಿಗಳು ಮಾತ್ರ |
| ಒಟ್ಟು | 1035936.00 | |

5. **ಹಣ ಪಾವತಿ ಮಾಡಿರುವ ದೃಢೀಕರಣದ ಪತ್ರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್, ಬೆವಿಕಂ ಶಿಡ್ಲಘಟ್ಟ ಗ್ರಾಮೀಣ ಉಪ ಉಪ ವಿಭಾಗದವರು ಪ್ರಮಾಣಿಕರಿಸಿ, ಆಡಳಿತ ಅನುಮೋದನೆ ನೀಡಲು ಈ ಕಛೇರಿಗೆ ಕಳುಹಿಸಿ ಕೊಡಬೇಕು.**

…2

6. ನಿಮ್ಮ ಕಟ್ಟಡಕ್ಕೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ದಾಖಲಾತಿಯನ್ನು ಸಲ್ಲಿಸತಕ್ಕದ್ದು, ನಿಮ್ಮ ಕಟ್ಟಡದಲ್ಲಿ ಅಳವಡಿಸಿರುವ ಯಂತ್ರೋಪಕರಣ ಹೆಸರು ಮತ್ತು ಸಾಮರ್ಥ್ಯ ಇತ್ಯಾದಿ ಮಾಹಿತಿ ಸಮಾಪನ ವರದಿ ಮತ್ತು ನಿಮ್ಮ ಕಟ್ಟಡದ ನಕ್ಷೆಯೊಂದಿಗೆ ಈ ಕಛೇರಿಗೆ ದ್ವಿಪ್ರತಿಯಲ್ಲಿ ಸಲ್ಲಿಸುವುದು.
7. DLMS feature ಇರುವಂತಹ 0.2 ಕ್ಲಾಸ್ ಮಾಪಕವನ್ನು ಮತ್ತು 3 ಸಿ.ಟಿ, 3 ಪಿಟಿ ಗಳಿರುವ ಹೆಚ್.ಟಿ ಮೀಟರಿಂಗ್ ಕ್ಯುಬಿಕಲ್ ಅನ್ನು ಅಳವಡಿಸುವುದು.
8. ಕಾಮಗಾರಿಗಳನ್ನು ಕರ್ನಾಟಕ ರಾಜ್ಯದ ಅನುಮತಿ ಪಡೆದ ಪ್ರಥಮ ದರ್ಜೆ ಗುತ್ತಿಗೆದಾರರ ಮುಖೇನ ಬೆವಿಕಂ ನ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಿರ್ವಹಿಸುವುದು.
9. ಪರಿವರ್ತಕಗಳು, ವಾಹಕಗಳು, ಮೀಟರಿಂಗ್ ಕ್ಯುಬಿಕಲ್, ಭೂಗತ ಕೇಬಲ್ ಮುಂತಾದ ಸಾಮಾಗ್ರಿಗಳು IE/BESCOM/KPTCL ಮಾನದಂಡಗಳ ಪ್ರಕಾರ ಇರಬೇಕು ಮತ್ತು ಎಲ್ಲಾ ಸಾಮಾಗ್ರಿಗಳ ಗುಣಮಟ್ಟವನ್ನು ಖರೀದಿ ಮಾಡುವ ಮೊದಲೇ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಪರಿಶೀಲಿಸಬೇಕು.
10. ಬೆವಿಕಂ ಅನುಮೋದನೆ ಪಡೆದ ಮಾರಾಟದಾರರಿಂದ (approved vendor) ಸಾಮಾಗ್ರಿಗಳ ಖರೀದಿ ಮಾಡಿರುವುದಕ್ಕೆ ದಾಖಿಲಾತಿಗಾಗಿ ಬಿಲ್ಲುಗಳನ್ನು / invoices ಗಳನ್ನು ಸಲ್ಲಿಸಬೇಕು. ನಿಗಮ ಕಛೇರಿಯ ಸುತ್ತೋಲೆ ಸಂಖ್ಯೆ BESCOM/BC-9/CGM (CA)/DGM(CA-3)/F-752/13-14/CYS-113 / 29.08.2013 ಪ್ರಕಾರ ಅರ್ಜಿದಾರರು ಪಾಲಿಮರ್ ವಿದ್ಯುತ್ ನಿರೋಧಕವನ್ನು ಮಾತ್ರ ಬಳಸಬೇಕು.
11. ಸ್ಥಾವರದ ಪವರ್ ಫ್ಯಾಕ್ಟರ್ 0.90 ಲ್ಯಾಗ್ ಗಿಂತ ಕಡಿಮೆಯಿಲ್ಲದೆ ನಿಗದಿತ ಸಾಮರ್ಥ್ಯ ವಿರುವ ಮತ್ತು ಅನುಮೋದನೆ ಪಡೆದಿರುವ ಕೆಪ್ಯಾಸಿಟರನ್ನು ಅಳವಡಿಸುವುದು.
12. ಮಾಪಕ ಸಾಧನ ಮತ್ತು ಸ್ವಿಚ್ ಗೇರ್‌ಗಳನ್ನು ನಕ್ಷೆಯ ಅನುಮೋದನೆಯನ್ನು ಮತ್ತು ತಪಾಸಣೆಯನ್ನು ಸಕ್ಷಮ ಪ್ರಾಧಿಕಾರದವರಿಂದ ಪಡೆಯುವುದು.
13. ಕಾಮಗಾರಿಗಳಿಗೆ ಬಳಸಿದ ಸಾಮಾಗ್ರಿಗಳ ಗುಣಮಟ್ಟವು ಮತ್ತು ಕಾಮಗಾರಿಯ ಗುಣಮಟ್ಟವನ್ನು, ಬೆವಿಕಂ ರವರು ಮಾರ್ಗಗಳನ್ನು ಮತ್ತು ಸಾಮಾಗ್ರಿಗಳನ್ನು ತೆಗೆದುಕೊಂಡ ದಿನದಿಂದ ಒಂದು ವರ್ಷದ ಅವಧಿವರೆಗೂ ಖಾತರಿ ನೀಡಬೇಕು.
14. ಕೆ.ಇ.ಆರ್.ಸಿ ನಿಯಮದ ಪ್ರಕಾರ, ವಿದ್ಯುತ್ ಸಾಮಾಗ್ರಿಗಳಿಗೆ ಮತ್ತು ಮಾರ್ಗಗಳಿಗೆ ವಿದ್ಯುತ್ ಪರಿವೀಕ್ಷಕರವರಿಂದ ಚಾಲನೆಗೊಳ್ಳುವ ಮೊದಲೇ ಅನುಮೋದನೆ ಪಡೆಯಬೇಕು.
15. ಹಾಲಿ ಇರುವ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಆಗುವ ಸಂದರ್ಭದಲ್ಲಿ, ಸಂಬಂಧ ಪಟ್ಟ ಅಧಿಕಾರಿಗಳಿಂದ ಅನುಮೋದನೆ ಪಡೆದು ಅದರ ವೆಚ್ಚವನ್ನು ಅರ್ಜಿದಾರರೇ ಪಾವತಿಸಬೇಕು. IE ನಿಯಮದ ಪ್ರಕಾರ ವಿದ್ಯುತ್ ಮಾರ್ಗಗಳಿಗೆ ಸೂಕ್ತವಾದ ಭದ್ರತೆ ನಿಶಾನೆ ನಿರ್ವಹಣೆ ಮಾಡಬೇಕು.
16. **ಮಾನ್ಯ ಸುಪ್ರೀಂ ಕೋರ್ಟ್ ಆದೇಶಾನುಸಾರ ಕಟ್ಟದ ಸ್ವಾಧೀನಾನುಭವ ಪ್ರಮಾಣ (OC certificate) ಪತ್ರವನ್ನು ಮೇಲಿನ ಸ್ಥಾವರದ ವಿದ್ಯುತ್ ಸಂಪರ್ಕ ನೀಡುವ ಮೊದಲು ಈ ಕಚೇರಿಗೆ ಸಲ್ಲಿಸುವುದು, ಇಲ್ಲದಿದ್ದಲ್ಲಿ ಮಂಜೂರಾತಿಯನ್ನು ರದ್ದುಗೊಳಿಸಲಾಗುವುದು.**
17. **ಹಾಲಿಯಿರುವ ಕೆಇಆರ್‌ಸಿ / ಸರಬರಾಜು ನಿಯಮಾವಳಿಗಳಿಗೆ ಮತ್ತು ಚಾಲ್ತಿಯಲ್ಲಿರುವ ತಿದ್ದುಪಡಿಗೆ ಭದ್ದವಾಗಿರಬೇಕು**
18. **ಭವಿಷ್ಯದಲ್ಲಿ, ಯಾವುದೇ ವ್ಯತ್ಯಾಸದ ಮೊತ್ತವು ಪಾವತಿಸಬೇಕಾದಲ್ಲಿ ಕೂಡಲೇ ಅದನ್ನು ಬೆವಿಕಂ/ಕವಿಪ್ರನಿನಿಗೆ ಪಾವತಿಸಬೇಕು.**

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಇಂಜನೀಯರ್ (ವಿ),
ಬೆ.ವಿ.ಕಂ, ಚಿಂತಾಮಣಿ ವಿಭಾಗ

ಪ್ರತಿಯನ್ನು

1. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಬೆ.ವಿ.ಕಂ, ಶಿಡ್ಲಘಟ್ಟ ಗ್ರಾಮೀಣ ಉಪ ವಿಭಾಗ ರವರ ಮಾಹಿತಿಗಾಗಿ.
2. ಪ್ರತಿಯನ್ನು ತಾ.ಸ-2, ತಾಂತ್ರಿಕ ಶಾಖೆ, ಬೆವಿಕಂ, ಚಿಂತಾಮಣಿ.